## ಐಷಾರಾಮದ ಹಲವು ಆಯ್ಕೆಗಳು

ಬೆಂಗಳೂರಿನ ತಾರಾ ಹೋಟೆಲ್‌ಗಳು ಮದುವೆಗೆಂದೇ ಹಲವು ಪ್ಯಾಕೇಜ್‌ಗಳನ್ನು ನಿಗದಿಮಾಡಿವೆ. ಉದಾಹರಣೆಗೆ, ಲೀಲಾ ಪ್ಯಾಲೆಸ್‌ನಲ್ಲಿ ಒಂದು ಮದುವೆ ಮಾಡಬೇಕು ಎಂದಿಟ್ಟುಕೊಳ್ಳಿ. ಒಬ್ಬರ ಊಟಕ್ಕೆ ಅಲ್ಲಿ 2300– 2800ರವರೆಗೆ ಆಯ್ಕೆಗಳು ಇರುತ್ತವೆ. ಇನ್ನಷ್ಟು ವೈವಿಧ್ಯದ ಖಾದ್ಯಗಳು ಬೇಕೆನಿಸಿದರೆ ಅದಕ್ಕೆ ಹೆಚ್ಚುವರಿ ಹಣವನ್ನು ಕೊಡಬೇಕು. ಮಂಟಪಕ್ಕೆ ಹೂವಿನ ಅಲಂಕಾರ ಮಾಡಲು ಅಂತಹ ಸ್ಥಳಗಳಲ್ಲಿ 20 ಲಕ್ಷದವರೆಗೆ ಖರ್ಚು ಮಾಡುವ ಆಯ್ಕೆಗಳು ಕೂಡ ಇರುತ್ತವೆ. ಕೋಣೆಗಳ ಬಾಡಿಗೆ ಪಂಚತಾರಾ ಹೋಟೆಲ್‌ಗಳಿಗೆ ಮದುವೆಗೆ ತುಸು ರಿಯಾಯಿತಿ ದರದಲ್ಲಿ ದೊರೆಯುವುದರಿಂದ ಐದಾರು ಸಾವಿರ ರೂಪಾಯಿಯನ್ನಂತೂ ತೆರಲೇಬೇಕು. ತಾಜ್ ವೆಸ್ಟ್‌ಎಂಡ್, ಐಟಿಸಿ ಗಾರ್ಡೇನಿಯಾ ತರಹದ ಹೋಟೆಲ್‌ಗಳಲ್ಲಿ ಮದುವೆ ಸಮಾರಂಭ ಮಾಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ.

ಬೆಂಗಳೂರು ಅರಮನೆ ಮೈದಾನದಲ್ಲಿ ಕೆಲವು ಐಷಾರಾಮಿ ಮದುವೆ ಸ್ಥಳಗಳು ಲಭ್ಯ ಇವೆ. ಗಾಯತ್ರಿ ವಿಹಾರ್, ವೈಟ್ ಪೆಟಲ್ಸ್, ನಲಪಾದ್ ಪೆವಿಲಿಯನ್, ಅನಂತ್ಯ, ಪ್ರಿನ್ಸಸ್ ಶೈನ್ ಆ್ಯಂಡ್ ಗ್ರೀನ್ ತರಹದ ವಿವಾಹ ಸಮಾರಂಭದ ಸ್ಥಳಗಳು ಅಲ್ಲಿ ಬಾಡಿಗೆಗೆ ದೊರೆಯುತ್ತವೆ. 4.5 ಲಕ್ಷದಿಂದ 20 ಲಕ್ಷದವರೆಗೆ ಕಲ್ಯಾಣ ಮಂಟಪದ ಸ್ಥಳಕ್ಕೆ ಬಾಡಿಗೆ ಕಟ್ಟಬೇಕು. ಪಂಚತಾರಾ ಹೋಟೆಲ್‌ಗಳಿಗೆ ಹೋಲಿಸಿದಲ್ಲಿ ಈ ಸ್ಥಳಗಳಲ್ಲಿ ಮದುವೆ ಖರ್ಚನ್ನು ಸ್ವಲ್ಪಮಟ್ಟಿಗೆ ಉಳಿಸಬಹುದು. ಪ್ರತಿ ತಟ್ಟೆ ಊಟಕ್ಕೆ ಇಲ್ಲಿಯೂ 1400–1800 ನಿಗದಿ ಮಾಡಿದ್ದಾರೆ. 500ರಿಂದ ಐದು ಸಾವಿರ ಮಂದಿಗೆ ಆಸನ ವ್ಯವಸ್ಥೆ ಮಾಡಬಲ್ಲ ಸ್ಥಳಗಳಿವು.

ಬೆಂಗಳೂರಿನ ಉತ್ತರ ಭಾಗದ ಆರಂಭ, ಲೆ ರೊಮಾ ಸಂಸಾರ, ಸೆದರ್ ಹೌಸ್, ಈಶಾನಾ–ದಿ ವೆನ್ಯೂ, ಈಡನ್ ಫಾರ್ಮ್ಸ್, ಯಲಹಂಕದಲ್ಲಿರುವ ವಿವಾಹ–ದಿ ವೆಡಿಂಗ್ ವೆನ್ಯೂ, ದಕ್ಷಿಣ ಬೆಂಗಳೂರಿನಲ್ಲಿ ಇರುವ ಬೋಗನ್ ವಿಲ್ಲಾ ಸೆಲೆಬ್ರೇಟ್ ಲಕ್ಷುರಿ, ಸಂಭ್ರಮ ಬೈ ಸ್ವಾನ್‌ಲೈನ್ಸ್, ದಿ ಕಿಂಗ್ಸ್ ಮೀಡೋಸ್ ಇವೆಲ್ಲವೂ ಅದ್ದೂರಿ ವಿವಾಹಗಳು ನೆರವೇರುವ ಪ್ರಮುಖ ಸ್ಥಳಗಳಾಗಿವೆ. ಕಿಂಗ್ಸ್ ಮೀಡೋಸ್‌ನಲ್ಲಿ 17 ಲಕ್ಷದಷ್ಟು ಬಾಡಿಗೆ ತೆರಬೇಕು. ಈಡನ್ ಫಾರ್ಮ್ಸ್‌ನಲ್ಲಿ ಮೂರೂವರೆ ಲಕ್ಷ ರೂಪಾಯಿ ಬಾಡಿಗೆಗೆ ಸ್ಥಳ ಲಭ್ಯ. ಊಟಕ್ಕೆ ಪ್ರತ್ಯೇಕವಾಗಿ ಆಯ್ಕೆಗೆ ತಕ್ಕಂತೆ ಪಾವತಿಸಬೇಕಾಗುತ್ತದೆ.



ಕನ್ನಡ ಚಲನಚಿತ್ರ ನಿರ್ದೇಶಕ ತರುಣ್ ಸುಧೀರ್ ಹಾಗೂ ನಟಿ ಸೋನಲ್ ಮೊಂತೆರೊ

ಇಂತಹ ಪ್ರಕರಣಗಳು ಪ್ರೇರಣೆ ನೀಡಿರುವ ಉದಾಹರಣೆಗಳೂ ಇಲ್ಲದೇ ಇಲ್ಲ. ‘ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು’ ಎನ್ನುವ ನಾಣ್ಣುಡಿಯನ್ನು ಇವತ್ತಿಗೂ ಒಪ್ಪಲೇಬೇಕು.

### ಆಸಕ್ತಿಕರ ಸಮೀಕ್ಷೆ

‘ವೆಡ್ ಮಿ ಗುಡ್’ ಎಂಬ ಮದುವೆ ಯೋಜಿಸಿಕೊಡುವ ವೆಬ್‌ಸೈಟ್ ಹಾಗೂ ಆ್ಯಪ್ ಕಂಪನಿಯು ಇತ್ತೀಚೆಗೆ ಸಮೀಕ್ಷೆಯೊಂದನ್ನು ನಡೆಸಿತ್ತು. ಮದುವೆಯ ಬಜೆಟ್, ಹನಿಮೂನ್ ಆಯ್ಕೆಗಳು, ಮದುವೆ ಹೇಗೆಲ್ಲ ಆಯೋಜಿತವಾಗುತ್ತಿದೆ ಹಾಗೂ ಬದಲಾಗುತ್ತಿರುವ ಟ್ರೆಂಡ್‌ಗಳೇನು ಎಂಬೆಲ್ಲ ಅಂಶಗಳಿಗೆ ಒತ್ತು ನೀಡಿ ಆ ಕಂಪನಿಯು ಸಮೀಕ್ಷೆ ನಡೆಸಿತ್ತು. ಭಾರತದ ಕೆಲವು ನಗರಗಳನ್ನು ಅದು ಸಮೀಕ್ಷೆಗೆ ಆಯ್ಕೆ ಮಾಡಿಕೊಂಡಿತ್ತು.

ಅದು ನೀಡಿದ ವರದಿಯ ಪ್ರಕಾರ ಭಾರತದ ಇತರ ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಮದುವೆಗೆ ಮಾಡುವ ಸರಾಸರಿ ಖರ್ಚು ಕಡಿಮೆ. ಭಾರತದ ಒಟ್ಟಾರೆ ನಗರಗಳಲ್ಲಿ ಮದುವೆಗೆಂದು ₹1 ಕೋಟಿಗಿಂತ ಹೆಚ್ಚು ಖರ್ಚು ಮಾಡುವವರ ಸಂಖ್ಯೆ ಶೇ 9. ಬೆಂಗಳೂರಿನಲ್ಲಿ ಅಷ್ಟು ಹಣ ಹರಿಸಿ ಮದುವೆ ಮಾಡುವವರ ಸಂಖ್ಯೆ ಶೇ 5.7

2025ರ ಮಾರ್ಚ್ 31ರವರೆಗೆ, ಕೆಲವು ತಿಂಗಳುಗಳ ಅವಧಿಯಲ್ಲಿ ಮದುವೆಯಾದ ಅಥವಾ ಮದುವೆ ನಿಶ್ಚಯವಾದ ಜೋಡಿಗಳನ್ನು ಸಮೀಕ್ಷೆಗೆ ಒಳಪಡಿಸಿದ್ದರು. ದೇಶದಾದ್ಯಂತ ಇಂತಹ 3,500 ಜೋಡಿಗಳು ಸಮೀಕ್ಷೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದರು.

ಈ ಸಮೀಕ್ಷೆಯು ಖರ್ಚು–ವೆಚ್ಚದ ಬಾಬತ್ತನ್ನಷ್ಟೇ ಅಲ್ಲದೆ ಹೊಸಕಾಲದ ಮದುವೆಯ ಮೇಲೆ ಏನೆಲ್ಲ ಪರಿಣಾಮಗಳು ಆಗುತ್ತಿವೆ ಎನ್ನುವುದರ ಮೇಲೂ ಬೆಳಕು ಚೆಲ್ಲಿತ್ತು. ಅವುಗಳ ಆಯ್ದ ಅಂಶಗಳು ಹೀಗಿವೆ:

- ಡೇಟಿಂಗ್ ಹಾಗೂ ವಧು–ವರಾನ್ವೇಷಣೆಯ ವೆಬ್‌ಸೈಟ್‌ಗಳಿಗಿಂತ ಸಾಮಾಜಿಕ ಮಾಧ್ಯಮದ ಆ್ಯಪ್‌ಗಳು ಮದುವೆ ಗೊತ್ತುಪಡಿಸುವಲ್ಲಿ ಹೆಚ್ಚು ಬಳಕೆಯಾಗುತ್ತಿವೆ. ಮದುವೆಗಳಿಗೆಂದೇ ಸಾಮಾಜಿಕ ಮಾಧ್ಯಮ ವ್ಯವಸ್ಥಾಪಕರನ್ನೂ ನಿಯೋಜಿಸಿಕೊಳ್ಳುವ ಭರಾಟೆ ಶುರುವಾಗಿದೆ.
- ಈ ವ್ಯವಸ್ಥಾಪಕರು ಮದುವೆ ನಿಶ್ಚಯವಾದ ವಧು ಹಾಗೂ ವರನನ್ನು ಅವರವರ ಸ್ನೇಹಿತರ ಬಳಗದೊಟ್ಟಿಗೆ ಬೇರೆ ಸ್ಥಳಗಳಿಗೆ ಔತಣಕೂಟಕ್ಕೆ ಕರೆದೊಯ್ದು, ಇನ್ನೂ ಹೆಚ್ಚಿನ ವಿಷಯಗಳನ್ನು ಅರಿಯಲು ನೆರವಾಗುತ್ತಾರೆ. ವಧು–ವರರ ಮಾನಸಿಕ ಆರೋಗ್ಯಕ್ಕೆ ಪೂರಕವಾದ ಚಟುವಟಿಕೆ ಆಯೋಜಿಸುತ್ತಾರೆ. ಗಂಡು ಹೇಗೋ, ಹೆಣ್ಣು ಹೇಗೋ ಎಂಬ ಆತಂಕ ದೂರ ಮಾಡುತ್ತಾರೆ.
- ಅಂತಹ ಔತಣಕೂಟಗಳಲ್ಲೇ ಮದುವೆ ಹೇಗೆ

